ಸಾಮಾಜಿಕ ಅರಣ್ಯ ಯೋಜನೆಯಲ್ಲಿ ಜಿಲ್ಲಾವಾರು 1983–84 ರಿಂದ 1986–87 ರವರೆಗೆ ಮಾಡಲಾದ ಖರ್ಚಿನ ವಿವರ

| ಕ್ರಮ ಸಂಖ್ಯೆ | ಜಿಲ್ಲೆಯ ಹೆಸರು | ೧೯೮೩–೮೪ | ೧೯೮೪–೮೫ | ೧೯೮೫–೮೬ | ೧೯೮೬–೮೭ | 4 ವರ್ಷದ ಒಟ್ಟು ಮೊತ್ತ |
|---|---|---|---|---|---|---|
| ೧ | ಬೆಂಗಳೂರು | ೨೯.೧೦ | ೪೬.೦೧ | ೪೭.೭೭ | ೭೫.೯೪ | ೧೯೮.೮೨ |
| ೨ | ತುಮಕೂರು | ೪೧.೦೨ | ೭೭.೭೦ | ೪೩.೨೩ | ೬೭.೨೯ | ೨೨೯.೨೪ |
| ೩ | ಕೋಲಾರ | ೧೨.೪೮ | ೫೦.೧೪ | ೬೦.೨೦ | ೫೧.೦೯ | ೧೭೩.೯೧ |
| ೪ | ಮಂಡ್ಯ | ೧೨.೯೭ | ೩೮.೯೯ | ೩೫.೬೪ | ೨೫.೬೩ | ೧೧೩.೨೩ |
| ೫ | ಮೈಸೂರು | ೧೪.೪೬ | ೪೩.೧೯ | ೪೭.೯೯ | ೪೯.೪೦ | ೧೫೫.೦೪ |
| ೬ | ಹಾಸನ | ೧೩.೯೯ | ೪೮.೪೪ | ೫೫.೯೯ | ೭೬.೬೯ | ೧೯೫.೧೧ |
| ೭ | ಬೆಳಗಾವಿ | ೨೪.೫೩ | ೬೦.೩೯ | ೫೧.೭೪ | ೬೯.೮೨ | ೨೦೬.೪೮ |
| ೮ | ಧಾರವಾಡ | ೪.೬೯ | ೩೨.೮೪ | ೪೫.೦೨ | ೪೮.೩೮ | ೧೩೦.೯೩ |
| ೯ | ಬಳ್ಳಾರಿ | ೩.೨೯ | ೩೧.೦೪ | ೪೮.೯೭ | ೪೯.೧೬ | ೧೩೨.೪೬ |
| ೧೦ | ರಾಯಚೂರು | ೧೪.೮೨ | ೩೫.೦೦ | ೨೮.೫೭ | ೪೮.೯೯ | ೧೨೮.೩೮ |
| ೧೧ | ಚಿತ್ರದುರ್ಗ | ೧೩.೪೦ | ೫೭.೬೦ | ೬೦.೩೮ | ೬೨.೬೪ | ೧೯೪.೦೪ |
| ೧೨ | ಕೊಡಗು | ೩.೧೭ | ೧೦.೯೦ | ೪.೨೭ | ೮.೫೮ | ೨೬.೯೨ |
| ೧೩ | ಚಿಕ್ಕಮಗಳೂರು | ೧೦.೪೯ | ೧೯.೦೧ | ೨೦.೧೦ | ೩೧.೭೧ | ೮೧.೩೧ |
| ೧೪ | ಶಿವಮೊಗ್ಗ | ೨೦.೫೩ | ೨೫.೫೫ | ೩೩.೫೯ | ೨೩.೨೮ | ೧೦೨.೯೫ |
| ೧೫ | ದಕ್ಷಿಣ ಕನ್ನಡ | ೭.೮೪ | ೧೬.೭೪ | ೧೪.೬೫ | ೧೦.೪೦ | ೪೯.೬೩ |
| ೧೬ | ಗುಲ್ಬರ್ಗ | ೩.೪೭ | ೧೬.೭೯ | ೪೩.೪.. | ೪೮.೮೮ | ೧೧೨.೫೫ |
| ೧೭ | ಬೀದರ್ | ೨೫.೬೧ | ೩೨.೮೪ | ೩೭.೫೫ | ೩೨.೮೦ | ೧೨೮.೮೦ |
| ೧೮ | ಬಿಜಾಪುರ | ೫.೭೮ | ೩೯.೫೪ | ೬೬.೬೨ | ೬೧.೭೨ | ೧೭೩.೬೬ |
| ೧೯ | ಉತ್ತರ ಕನ್ನಡ | — | ೧೭.೩೫ | ೩೭.೨೨ | ೨೭.೯೯ | ೮೨.೫೬ |
| ೨೦ | ಸ್ಟೇಟ್ ಸೆಕ್ಟಾರ್ | ೯.೪೪ | ೫೯.೬೨ | ೧೦೭.೧೯ | ೬೩.೯೧ | ೨೪೦.೧೬ |
| | | ೨೭೧ ೧೦ | ೭೫೯.೬೮ | ೮೯೧.೧೦ | ೯೩೪.೩೦ | ೨೮೫೬.೧೮ |

ಕೊಳ್ಳೇಗಾಲದಲ್ಲಿ ಹೈನುಗಾರಿಕೆ ಮತ್ತು ಶೀಥಲ ಕೇಂದ್ರ ತೆಗೆಯಂವ ಬಗ್ಗೆ

೩೨೬. ಶ್ರೀ ಜಿ. ರಾಜುಗೌಡ (ಹನೂರು).—ಮಾನ್ಯ ಪಶು ಸಂಗೋಪನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

(ಅ) ಮೈಸೂರು ಜಿಲ್ಲೆಯ ಕೊಳ್ಳೆಗಾಲ ತಾಲ್ಲೂಕಿನಲ್ಲಿ ಇತ್ತೀಚಿನ ಜನಗಣತಿಯಂತೆ ಎಷ್ಟು ರಾಸುಗಳು ಅಂದರೆ ಎತ್ತುಗಳು, ಹಸುಗಳು, ಎಮ್ಮೆಕೆಳು, ಕುರಿಗಳು, ಆಡುಗಳು ಇವೆ.

(ಆ) ಅಲ್ಲಿ ತೆರೆದಿರುವ ಪಶುವೈದ್ಯ ಚಿಕಿತ್ಸಾಲಯಗಳೆಷ್ಟು,

(ಇ) ಎಲ್ಲಾ ಚಿಕಿತ್ಸಾಲಯಗಳಿಗೂ ಪೂರ್ತಿ ಸಿಬ್ಬಂದಿ ನೇಮಕವಾಗಿದೆಯೇ,

(ಈ) ವಿಸ್ತೀರ್ಣದಲ್ಲಿ ತುಂಬಾ ದೊಡ್ಡ ತಾಲ್ಲೂಕಾದ್ದರಿಂದ, ಎಲ್ಲಾ ಕಡೆಯಿಂದಲೂ ಹಾಲು ಶೇಖರಿಸಿ ಸಾಗಣೆಕೆ ಮಾಡಲು ಹೆಚ್ಚಿನ ಕಾಲವಾಗುವುದರಿಂದ ಅಲ್ಲಿ ಒಂದು ಶೀಥಲ ಕೇಂದ್ರ (ಚಿಲ್ಲಿಂಗ್ ಸೆಂಟರ್)ನ್ನು ಪ್ರಾರಂಭ ಮಾಡಲು ಸರ್ಕಾರದವರು ಕ್ರಮ ಕೈಗೊಳ್ಳುವರೆ ?

ಶ್ರೀ ಸಿದ್ದರಾಮಯ್ಯ (ಪಸು ಸಂಗೋಪನೆ ಮತ್ತು ಪಶುವೈದ್ಯಕೀಯ ಸೇವೆಗಳ ಸಚಿವರು).—

(ಅ) ೧೯೮೩ರ ಜಾನುವಾರು ಗಣತಿಯ ಪ್ರಕಾರ ಕೊಳ್ಳೆಗಾಲ ತಾಲ್ಲೂಕಿನಲ್ಲಿರುವ ರಾಸುಗಳ ವಿವರ.—

| | | | |
|---|---|---|---|
| ೧. | ಎತ್ತುಗಳು ಹಾಗೂ ಹಸುಗಳು | ... | ೧,೮೯,೪೫೫ |
| ೨. | ಕುರಿಗಳು | ... | ೧೬,೧೯೩ |
| ೩. | ಮೇಕೆಗಳು | ... | ೨೯,೬೬೮ |
| ೪. | ಹಂದಿಗಳು | ... | ೧೬೮ |
| ೫. | ನಾಯಿಗಳು | ... | ೧೨,೫೬೭ |
| ೬. | ಇತರೆ ಪ್ರಾಣಿಗಳು | ... | ೪೭೮ |
| | ಒಟ್ಟು ಪ್ರಾಣಿಗಳು | ... | ೨,೪೭,೯೮೮ |
| ೭. | ಕೋಳಿಗಳು | ... | ೧,೦೩,೦೨೫ |

(ಆ) ಆರು (೬)

(ಇ) ಎರಡು 'ಡಿ' ದರ್ಜೆ ನೌಕರರ ಹುದ್ದೆ ಮಾತ್ರ ಖಾಲಿ ಇದ್ದು, ಮಿಕ್ಕ ಎಲ್ಲಾ ಸಿಬ್ಬಂದಿ ವರ್ಗದವರನ್ನು ನೇಮಕ ಮಾಡಲಾಗಿದೆ.

(ಈ) ಹೌದು

## ಚಿಂಚೋಳಿ ತಾಲ್ಲೂಕಿನಲ್ಲಿರುವ ಪಶುವೈದ್ಯ ಶಾಲೆಗಳ ಬಗ್ಗೆ

೪೬೭. ಶ್ರೀ ಎಂ. ವೀರಯ್ಯಸ್ವಾಮಿ (ಚಿಂಚೋಳಿ).—ಮಾನ್ಯ ಪಶು ಸಂಗೋಪನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

(ಅ) ಚಿಂಚೋಳಿ ತಾಲ್ಲೂಕಿನಲ್ಲಿರುವ ಪಶುವೈದ್ಯ ಶಾಲೆ ಹಾಗೂ ಗ್ರಾಮೀಣ ಪಶು ಚಿಕಿತ್ಸಾಲಯಗಳೆಷ್ಟು? (ವಿವರಗಳನ್ನೊದಗಿಸುವುದು).

(ಆ) ತಾಲ್ಲೂಕಿನಲ್ಲಿ ಪಶುವೈದ್ಯರು ಹಾಗೂ ಜಾನುವಾರು ಪರೀಕ್ಷಕರ ಹುದ್ದೆಗಳ ಸಂಖ್ಯೆ ಎಷ್ಟು ಹಾಗೂ ಆ ಪೈಕಿ ಕೆರವಾಗಿರುವ ಹುದ್ದೆಗಳೆಷ್ಟು ;

(ಇ) ಸದರಿ ಹುದ್ದೆಗಳನ್ನು ಯಾವಾಗ ತುಂಬಲಾಗುವುದು ;

(ಈ) ತಾಲ್ಲೂಕಿನಲ್ಲಿರುವ ಜಾನುವಾರು ಸಂಖ್ಯೆಗೆ ಅನುಗುಣವಾಗಿ ಚಿಕಿತ್ಸಾಲಯಗಳು ವಂಜೂರಾಗಿವೆಯೇ ;

(ಉ) ಅಸಮರ್ಪಕತೆ ಇದ್ದಲ್ಲಿ ಯಾವಾಗ ಸರಿಪಡಿಸಲಾಗುವುದು?

ಶ್ರೀ ಸಿದ್ದರಾಮಯ್ಯ (ಪಶು ಸಂಗೋಪನೆ ಮತ್ತು ವೈದ್ಯಕೀಯ ಸೇವೆಗಳ ಸಚಿವರು).—

(ಅ) ಚಿಂಚೋಳಿ ತಾಲ್ಲೂಕಿನಲ್ಲಿ ಎರಡು ಪಶುವೈದ್ಯ ಶಾಲೆಗಳು, ಎಂಟು ಗ್ರಾಮೀಣ ಪಶು ಚಿಕಿತ್ಸಾಲಯಗಳು ಕೆಳಕಂಡ ಸ್ಥಳಗಳಲ್ಲಿ ಕಾರ್ಯನಿರ್ವಹಿಸುತ್ತಿವೆ.—

೧) ಪಶುವೈದ್ಯ ಶಾಲೆ, ಚಿಂಚೋಳಿ
೨) ಪಶುವೈದ್ಯ ಶಾಲೆ, ಕೂಡ್ಲಿ
೩ ಗ್ರಾಮೀಣ ಪಶುವೈದ್ಯ ಶಾಲೆ, ನಿಡಗುಂದ
೪) ಗ್ರಾಮೀಣ ಪಶುವೈದ್ಯ ಶಾಲೆ, ಕೊಂಚಾವರಂ
೫) ಗ್ರಾಮೀಣ ಪಶುವೈದ್ಯ ಶಾಲೆ, ಸಂಳೇಪೇಟೆ
೬) ಗ್ರಾಮೀಣ ಪಶುವೈದ್ಯ ಶಾಲೆ, ಚಿಮ್ಮನ್ ಚೋಡ್